ನಾಮಸ್ಮರಣೆ ಚಿಂತನ ಧಾರೆ - 2



# ರಂಗವಿಠಲ

ಸಂಚಿಕೆ-1 ವಿರೋಧಿ ಶ್ರಾವಣ AUGUST 2009

ಶ್ರೀ ಶ್ರೀಪಾದರಾಜರ ಭಕ್ತಿ ಸಾಹಿತ್ಯ, ಕನ್ನಡ ದಾಸ ಸಾಹಿತ್ಯ, ದೇವರನಾಮ ಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸ ಪತ್ರಿಕೆ

ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ)

ನರಸಿಂಹತೀರ್ಥ, ಮುಳಬಾಗಿಲು - 563131, ಕೋಲಾರ ಜಿಲ್ಲೆ - 08159 - 242111



ನಾಗಪುರದಲ್ಲಿಯ ತೆಕ್ಕಟೆ ಗಣೇಶ



ಬದರಿಯಲ್ಲಿಯ ಶ್ರೀರಾಘವೇಂದ್ರಸ್ವಾಮಿಗಳ ಬೃಂದಾವನ



ಹಿರಿಯ ಪಟ್ಟ ಶ್ರೀ ಶ್ರೀವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು, ಬೆಂಗಳೂರು ರಾಘವೇಂದ್ರ ಕಾಲೋನಿಯಲ್ಲಿ ಚಾತುರ್ಮಾಸ್ಯ ಸಂಕಲ್ಪವನ್ನು ನೆರವೇರಿಸಿದರು.



ಕಿರಿಯ ಪಟ್ಟ ಶ್ರೀ ಶ್ರೀಕೇಶವನಿಧಿತೀರ್ಥ ಶ್ರೀಪಾದಂಗಳವರು, ಹರಿದ್ವಾರ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಪ್ರಥಮ ಚಾತುರ್ಮಾಸ್ಯ ಸಂಕಲ್ಪವನ್ನು ನೆರವೇರಿಸಿದರು.

## ಬದರಿ ಪಾದಯಾತ್ರೆಯ ವಿಶೇಷ ಚಿತ್ರಗಳು







# ರಂಗವಿಠಲ

ಶ್ರೀ ಶ್ರೀಪಾದರಾಜರ ಭಕ್ತಿಸಾಹಿತ್ಯ, ದಾಸಸಾಹಿತ್ಯ, ದೇವರನಾಮ,
ಧರ್ಮಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ

**ವಿರೋಧಿ, ಶ್ರಾವಣ**

**ಆಗಸ್ಟ್, 2009**

(ಜಿಲ್ಲಾದಂಡಾಧಿಕಾರಿಗಳ ಮತ್ತು RNI ಅಧಿಕೃತ ಅನುಮೋದನೆ ನಂತರ ಇದು
(ಸಂಚಿಕೆ 1)
ಪತ್ರಿಕೆಯು ಪ್ರತಿ ತಿಂಗಳು 15 ರಂದು ಪ್ರಕಟವಾಗುತ್ತದೆ.)

ಸಂಪಾದಕ :
ವಿದ್ವಾನ್ ಎಚ್.ಬಿ. ಲಕ್ಷ್ಮೀನಾರಾಯಣ
58, ರಾಘವೇಂದ್ರಕಾಲೋನಿ, ಚಾಮರಾಜಪೇಟೆ,
ಬೆಂಗಳೂರು-560 018. ph. 26607741

ಪ್ರಕಾಶಕ :
ಶ್ರೀ ಶ್ರೀಪಾದರಾಜ ಮಠ
ಮುಳಬಾಗಿಲು-563131. ಕೋಲಾರ ಜಿಲ್ಲೆ
phone: 9242613866

ಮುದ್ರಣ :
ಶ್ರೀ ಶ್ರೀಪಾದರಾಜ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್
ನಂ. 58, ರಾಘವೇಂದ್ರಕಾಲೋನಿ, ಚಾಮರಾಜಪೇಟೆ,
ಬೆಂಗಳೂರು-560 018. Phone 080-26914637

**Address: Postal / Courier / Email**
ಶ್ರೀ ಶ್ರೀಪಾದರಾಜ ಮಠ
ನಂ 58, ರಾಘವೇಂದ್ರಕಾಲೋನಿ, ಚಾಮರಾಜಪೇಟೆ,
ಬೆಂಗಳೂರು-560 018. ph. 080-26914637, 26607741
Webmail: Sripadarajamutt.org
Email: hblnarayana@yahoo.com



## ಸಂದೇಶ

**ಮಾನಸಪೂಜೆ ಮಾಡು ಮನೋಹರದಿಂದ**

**ಬಿಂಬ ಮೂರುತಿ ಧ್ಯಾನ ಇಂಬಾಗಿ ಮಾಡಲು।**

**ಇಂಬು ತೋರುವನಲ್ಲಿ ವಿಜಯವಿಠ್ಠಲ ಪೊರೆವ॥**

ಹೀಗೆಂದು ವಿಜಯದಾಸರ ಸಂದೇಶ. ಇದರ ವಿಸ್ತಾರವೇ ಜಗನ್ನಾಥದಾಸರಾದಿಯಾಗಿ ಎಲ್ಲ ಹರಿದಾಸರೂ ನಿರೂಪಿಸಿದ ನಾಮಸ್ಮರಣೆಯ ಮಹಿಮೆ.

ಸಾಧಕರೆಲ್ಲರಿಗೂ ಬಿಂಬ ಕಾಂಬುವ ತವಕ. ಬಿಂಬ ಕಾಣಲು ದಾಸರಿತ್ತ ಮಾರ್ಗದರ್ಶನದಿ ಮೂಡಿಬಂದ **ರಂಗವಿಠಲನ** ನಾಮಸ್ಮರಣೆಯ ವಿಚಾರ ಸಮೃದ್ಧಿಯಿಂದ ಕೂಡಿದೆ. ಹರಿನಾಮಸ್ಮರಣೆಯ. ಸಂಭ್ರಮವನ್ನು **ರಂಗವಿಠಲ** ಎಲ್ಲೆಡೆಯೂ ಪಸರಿಸಲಿ.

ಗಾನದಿಂದ ಕುಣಿದು ಪಾಡಿದರೆ ಆತ್ಮೋದ್ಧಾರದ ಮಾರ್ಗ. ಈ ಮಾರ್ಗದಲ್ಲಿ ದಾಸರುಗಳೊಂದಿಗೆ ಸಂಭ್ರಮಿಸುವ ಓದುಗರಿಗೆ ಸನ್ಮಂಗಳವಾಗಲೆಂದು ಮಾಡುವ.

ನಾರಾಯಣಸ್ಮರಣೆಗಳು

**ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು**





## ಸಂದೇಶ

**ಸ್ಮರಿಸು ಸಂತತ ಹರಿಯ**

**ಕರುಣಾಳುಗಳ ದೊರೆಯ॥**

ಹರಿನಾಮ ಸ್ಮರಣೆಯನ್ನು ಯಾವಾಗಲೂ ಮಾಡುತ್ತಿರಬೇಕು. ಭಕ್ತಿಯಿಂದ ಕೂಡಿದ ಈ ಸ್ಮರಣೆ ಭಗವಂತನ ಪ್ರೀತಿಗೆ ಕಾರಣವಾಗುವುದು. ಜಗನ್ನಾಥದಾಸರು ಭಗವಂತನ ಕಾರುಣ್ಯವನ್ನು ಅನೇಕ ದೃಷ್ಟಾಂತಗಳಿಂದ ತೋರಿಸಿಕೊಟ್ಟು ನಾಮಸ್ಮರಣೆಯ ಮಹತ್ವ ಎಂತಹದು ಎಂಬುದನ್ನು ಸುಂದರವಾಗಿ ವಿವರಿಸಿದ್ದಾರೆ.

ಸ್ಮರಣೆ ಮಾತ್ರದಿಂದ ಭಕ್ತರ ಅನೇಕ ಜನ್ಮಗಳ ಪಾಪಗಳನ್ನು ಕಳೆಯುವ ಹರಿಯ ಮಹಿಮೆಯ ಕುರಿತು ಹೇಳಿರುವ ಲೇಖನಗಳು ಅಭಿನಂದನೀಯ. ಭಗವಂತನ ಸ್ಮರಣೆಯೇ ನಿಜವಾದ ಸಂಪತ್ತು. ನಾಮಸ್ಮರಣೆಯಿಂದ ಧ್ಯಾನ, ಧ್ಯಾನದಿಂದ ಪ್ರಸಾದ.

**ರಂಗವಿಠಲ** ಸಂಚಿಕೆ ನಾಮಸ್ಮರಣೆಯ ವೈಶಿಷ್ಟ್ಯಕ್ಕಾಗಿ ಮೀಸಲಾಗಿರುವದು ಹೆಮ್ಮೆಯ ಸಂಗತಿ ಎಂದು ತಿಳಿಸುತ್ತಾ ಮಾಡುವ.

ನಾರಾಯಣಸ್ಮರಣೆಗಳು

**ಶ್ರೀ ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು**

**ಮಹಿಪತಿದಾಸರು ಹೇಳಿದ ಕಥೆಗಳು**

## ತೇಲಿಸು ಸ್ಥೂಲವ

**ರಾಮರಾಮೆನ್ನಿರೋ।**
**ರಾಮನಾಮವೆ ತಾ ಪಾಪಕ್ಕೆ ಮರ್ವತಾ॥ ಪ॥**

**ನಾಮತೇಲಿಸಿತು ನೀರೊಳು ಪರ್ವತಾ॥**
**ನೇಮದಿಂದಾದರ ಭಕ್ತರರಹುತಾ।**
**ಶೀಮಿಕ್ಕೆಗೊಟ್ಟಿತು ಭಕ್ತಗ ಶಾಶ್ವತಾ॥**

-ಶ್ರೀಮಹಿಪತಿದಾಸರು (ಕೊರಟ ಶ್ರೀನಿವಾಸರಾವ್ - ಪುಟ 240)

ಈ ಕೀರ್ತನೆಯಲ್ಲಿ **ಶ್ರೀಮಹಿಪತಿದಾಸರು** ರಾಮನಾಮದ ಮಹತ್ವವನ್ನು ರಾಮಾಯಣದ ಕಥೆಗಳಿಂದ ತಿಳಿಸುತ್ತಾರೆ.

ರಾಮನಾಮವು ಪಾಪವನ್ನು ಸುಟ್ಟು ಬಿಡುತ್ತದೆ. ಮತ್ತು ಕಲ್ಲು ಬಂಡೆಗಳನ್ನು ನೀರಿನಲ್ಲಿ ತೇಲಿಸುತ್ತದೆ ಎಂಬುದು ಈ ಕಥೆಯ ವಿಶೇಷ.

ರಾಮನು ಲಂಕಾಪಟ್ಟಣಕ್ಕೆ ಸೈನ್ಯದೊಡನೆ ಹೋಗಬೇಕಾಗಿರುತ್ತದೆ. ಕಪಿಗಳ ಸೈನ್ಯವನ್ನು ಸಮುದ್ರದಾಟಿಸುವ ವಿಷಯದಲ್ಲಿ ಎಲ್ಲರಿಗೂ ಕೌತುಕವಾಗುತ್ತದೆ. ಆಗ ಒಂದೊಂದು ಕಪಿಯೂ ಒಂದೊಂದು ಬಗೆಯ ಆಲೋಚನೆಯನ್ನು ನೀಡುತ್ತವೆ. ಕೊನೆಗೆ ಎಲ್ಲರ ಆಲೋಚನೆಗಳು ಸರಿಹೋಗದಿದ್ದಾಗ ಹನುಮಂತನು ಸೇತುವೆಯನ್ನು ನಿರ್ಮಿಸಲು ಸಲಹೆ ನೀಡುತ್ತಾನೆ. ಸೇತುವೆಗಾಗಿ ಕಲ್ಲು ಬಂಡೆಗಳ ಮೇಲೆ **ರಾಮ** ನಾಮವನ್ನು ಬರೆದು ಸಮುದ್ರದಲ್ಲಿ ಬಿಟ್ಟಾಗ ಕಲ್ಲು ಬಂಡೆಗಳು ತೇಲಿ ಸೇತುವೆ ನಿರ್ಮಾಣವಾಗುತ್ತದೆ.

ಈ ಕಥೆಯಿಂದ ರಾಮನಾಮದ ಶಕ್ತಿಯು ತಿಳಿಯುತ್ತದೆ. ಇದರಿಂದ ನಾಮಸ್ಮರಣೆಯು ಬಹಳ ಮುಖ್ಯವಾದುದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಶ್ರೀ ಶ್ರೀವಿಜ್ಞಾನನಿಧಿತೀರ್ಥರು



**ಪಂಢರಿನಾಥದಾಸರು ಹೇಳಿದ ಕಥೆಗಳು**

## ಪಾಂಡವ ಪರಿಪಾಲ

**ಮರೆತರೆ ಸುಖವುಂಟೇ। ಶ್ರೀಹರಿಯನು ॥ ಪ॥**

**ದುರುಳ ದುರ್ಯೋಧನ ಕ್ಲೇಶವಗೊಳಿಸಲು**
**ಹರಿ ಪಾಂಡವರನು ಕೈ ಬಿಟ್ಟನೇ....**

- ಭಜನ ಪಾರಿಜಾತ (ಪುಟ-54)

ಈ ಸಾಲುಗಳಲ್ಲಿ **ಪಂಡರಿನಾಥ ವಿಠಲರು** ಕೃಷ್ಣಭಕ್ತರಾದ ಪಾಂಡವರನ್ನು ಕಾಪಾಡಿದ ಕಥೆಯನ್ನು ತಿಳಿಸುತ್ತಾರೆ.

ದುರ್ಯೋಧನನು ಪಾಂಡವರನ್ನು ಹಿಂಸಿಸುತ್ತಾನೆ. ಪಾಂಡವರಿಗೆ ಎಲ್ಲ ತರಹದ ತೊಂದರೆಗಳನ್ನು ಕೊಡುತ್ತಾನೆ. ಅವರನ್ನು ದ್ಯೂತದಲ್ಲಿ ಸೋಲಿಸಿ ದ್ರೌಪದಿಯನ್ನು ಪಣವಾಗಿ ಇಟ್ಟುಕೊಂಡು ಮೋಸದಿಂದ ಗೆಲ್ಲುತ್ತಾನೆ . ಪಾಂಡವರನ್ನು ಅರಣ್ಯವಾಸ, ಅಜ್ಞಾತವಾಸಗಳಿಗೆ ಕಳುಹಿಸುತ್ತಾನೆ.

ಇದಕ್ಕೆ ಮೊದಲು ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಲು ಬಯಸುತ್ತಾನೆ.

ಈ ರೀತಿ ಕಷ್ಟಕೋಟಲೆಗಳನ್ನು ನೀಡಿದಾಗ್ಯೂ ಶ್ರೀಹರಿ ಕೃಷ್ಣರೂಪಿಯಾಗಿ ಪಾಂಡುವರನ್ನು ಕಾಪಾಡಲಿಲ್ಲವೇ? ಎಂಬ ಪ್ರಶ್ನೆಯ ಮೂಲಕ ಹರಿನಾಮದ ಮಹತ್ವವನ್ನು ತಿಳಿಸುತ್ತಾರೆ.

ಶ್ರೀ ಶ್ರೀವಿಜ್ಞಾನನಿಧಿತೀರ್ಥರು

**ಪಂಥರಿನಾಥದಾಸರು ಹೇಳಿದ ಕಥೆಗಳು**

## ಪ್ರಹ್ಲಾದವರದ

**ತರಳ ಪ್ರಹ್ಲಾದನು ಭಕ್ತಿಲಿ ಕರೆಯಲು**
**ಭರದಿ ನಾರಾಯಣ ಬರಲಿಲ್ಲವೇ.....**
**ವರಧ್ರುವರಾಯನ ತಪಸಿಗೆ ಮೆಚ್ಚಿದ**
**ಹರಿ ತ್ವರದಲಿ ತಾನೆ ಬರಲಿಲ್ಲವೇ...**

- ಭಜನ ಪಾರಿಜಾತ (ಪುಟ-54)

**ಪಂಥರಿನಾಥ ವಿಠಲರು** ಹರಿನಾಮ ಸ್ಮರಣೆಯ ಮಹತ್ವವನ್ನು ಪ್ರಹ್ಲಾದನ ಕಥೆಯ ಮೂಲಕ ಈ ಸಾಲಿನಲ್ಲಿ ತಿಳಿಸುತ್ತಾರೆ.

**ಬದಿಗನಾಗಿದ್ದು ಹರಿಯು ಪಾಲಿಪ**
**ವಿಧಿಶಿವವಂದ್ಯ ನಾರಾಯಣ....**

ಎಂಬ ಈ ಪಲ್ಲವಿಯಿಂದ ಪ್ರಾರಂಭವಾಗುವ ಈ ಕೀರ್ತನೆಯು ಹರಿನಾಮಸ್ಮರಣೆಯ ಮಹತ್ವವನ್ನು ದೃಷ್ಟಾಂತಗಳಿಂದ ತಿಳಿಸುತ್ತದೆ. ಹಿರಣ್ಯಕಶ್ಯಪು ಪ್ರಹ್ಲಾದನಿಗೆ ಎಲ್ಲಾ ರೀತಿಯಲ್ಲಿಯೂ ಹಿಂಸೆ ಪಡಿಸುತ್ತಾನೆ. ಆದರೆ ಪ್ರಹ್ಲಾದನು ಸದಾ ಕಾಲವೂ ಶ್ರೀಹರಿನಾಮಸ್ಮರಣೆಯನ್ನು ಬಿಟ್ಟು ಬೇರಾವುದನ್ನೂ ಚಿಂತಿಸುವದಿಲ್ಲ, ಕೊನೆಗೆ ಎಲ್ಲಾ ಉಪಾಯಗಳು ತೀರಿದಾಗ ಹಿರಣ್ಯಕಶ್ಯಪು ಪ್ರಹ್ಲಾದನಿಗೆ ಹರಿಯನ್ನು ತೋರೆಂದು ಹೇಳುತ್ತಾನೆ. ಆಗ ಪ್ರಹ್ಲಾದನು ಭಕ್ತಿಯಿಂದ **ನಾರಾಯಣ** ಎಂದು ನೆನೆದ ಮಾತ್ರಕ್ಕೆ ಕಂಭದಿಂದ ನಾರಸಿಂಹರೂಪಿಯಾಗಿ ಬರಲಿಲ್ಲವೇ ಎಂದು ದಾಸರು ಪ್ರಶ್ನಿಸುವ ದಾಟಿಯಲ್ಲಿ ಹರಿನಾಮದ ಮಹತ್ವವನ್ನು ತಿಳಿಸುತ್ತಾರೆ.

ಭಾಗವತದ ಕಥೆಗಳನ್ನು ಸುಂದರ ಶೈಲಿಯಿಂದ **ಪಂಥರಿನಾಥವಿಠಲಾಂಕಿತರಾದ** ಶ್ರೀರಾಘವೇಂದ್ರರಾಯರು ಭಕ್ತಜನರಿಗಾಗಿ ವರ್ಣಿಸಿದ್ದಾರೆ.

ಶ್ರೀ ಶ್ರೀವಿಜ್ಞಾನನಿಧಿತೀರ್ಥರು



**ಹರಿನಾಮ ಸ್ಮರಣೆಯ ಮಹತ್ವ**

**ವಿಶೇಷ ಲೇಖನ**

## ಹರಿದಾಸರ ಕೃತಿಗಳಲ್ಲಿ ನಾಮಸ್ಮರಣೆ

ಸಮಸ್ತ ಹರಿದಾಸರ ಕೃತಿಗಳು ಹರಿನಾಮಸ್ಮರಣೆಯನ್ನೇ ಉದ್ದೇಶಿಸಿವೆ. ಆದ್ದರಿಂದ ಅವುಗಳನ್ನು **'ದೇವರ ನಾಮಗಳು'** ಎಂದೇ ಕರೆಯುತ್ತೇವೆ. ನಮ್ಮ ದಿನನಿತ್ಯದ ಜೀವನದಲ್ಲಿ ನಾಮಸ್ಮರಣೆ ಮಾಡುವುದೇ ಮುಕ್ತಿಗೆ ಅತ್ಯಂತ ಸುಲಭಮಾರ್ಗವೆಂದು ತಿಳಿಸುವುದೇ ಅವರ ಮುಖ್ಯ ಉದ್ದೇಶವಾಗಿದೆ. ಇದನ್ನೇ ನಮ್ಮ ಬಾಲಹರಿದಾಸರಾಗಿದ್ದ ಧ್ರುವಾಂಶಸಂಭೂತರಾದ **ಶ್ರೀಶ್ರೀಪಾದರಾಜರು** ಹೇಳಿದ್ದಾರೆ.

ಈ ಕಲಿಯುಗದಲ್ಲಿ ಕೇವಲ ಹರಿನಾಮ ಸ್ಮರಣೆಯಿಂದಲೇ ದೇವರ ಕರುಣೆಯನ್ನು ಸಂಪಾದಿಸಿ ಮುಕ್ತಿಯನ್ನು ಹೊಂದಬೇಕೆಂದು ತಿಳಿಸಿದ್ದಾರೆ. ಧ್ಯಾನ, ಯಜ್ಞ, ದೇವತಾರ್ಚನೆಗಳು ಈ ಕಲಿಯುಗದಲ್ಲಿ ಅತ್ಯಂತ ದುಸ್ತರವಾಗಿವೆ. ಆದಕ್ಕಾಗಿ ಯಾವುದೇ ಕಷ್ಟವಿಲ್ಲದೆ ಯಾವುದೇ ದುಃಖವಿಲ್ಲದೆ ಅತ್ಯಂತ ಸುಲಭ ಸಾಧ್ಯವಾದ ಮುಕ್ತಿಪ್ರದವಾದ ನಾಮಸ್ಮರಣೆಯನ್ನೇ ಮಾಡತಕ್ಕದ್ದೆಂಬುದು ಅವರ ಆದೇಶವಾಗಿದೆ.

ಭಗವನ್ನಾಮಸ್ಮರಣೆ ಮಾಡದಿರುವುದು ಮಹಾ ಪಾಪಕರ. **ಶ್ರೀ ಶ್ರೀಪಾದರಾಜರ** ಆದ್ಯಶಿಷ್ಯರಾದ **ಶ್ರೀವ್ಯಾಸರಾಯರು** 'ಆದ್ಯಪರಾಧ ಹರಿವಿಸ್ಮರಣೆ' ಎಂದೇ ನಿರ್ಣಯಿಸಿದರೆ; ವ್ಯಾಸ, ದಾಸ ಪರಂಪರೆಯ ಪ್ರಶಿಷ್ಯರಾದ **ಶ್ರೀವಿಜಯೀಂದ್ರರು**

**ನೃಹರೇಽಚ್ಯುತ ಮಾಧವೇಶ ಕೃಷ್ಣ**
**ಹರಿ ಗೋವಿಂದ ಮುಕುಂದನಾಮಜಾತಮ್।**
**ನ ಕೀರ್ತಯತೀಹ ಮೇ ಕುಜಿಹ್ವಾಽಪಿ ತು**
**ದುರ್ಲಿಂಗಭಗಾಂಕಿತಾನ್ ಕುಶಬ್ದಾನ್ ॥**

- ಸ್ತೋತ್ರ ಸಂಪುಟಮ್ (ಪುಟ 266)

ಎಂದು ಭಗವಂತನಲ್ಲಿ ಕ್ಷಮಾಪಣೆ ಬೇಡಲು ತಿಳಿಸಿದ್ದಾರೆ.

ಹರಿಯನ್ನು ಮರೆಯುವ ರೋಗವನ್ನು ಅವನೇ ಪರಿಹರಿಸಬೇಕೆಂದರು **ಶ್ರೀಗೋಪಾಲದಾಸರು:**

**ಆವರೋಗವೊ ಎನಗೆ ದೇವ ಧನ್ವಂತರಿ।**
**ಹರಿ ಮೂರ್ತಿಗಳು ಎನ್ನ ಕಂಗಳಿಗೆ ಕಾಣಿಸವು**
**ಹರಿ ಕಥಾ ಶ್ರವಣ ಕೇಳದು ಎನ್ನ ಕಿವಿಗೆ**
**ಹರಿ ಮಂತ್ರ ಸ್ತೋತ್ರ ಬಾರದೆನ್ನ ನಾಲಿಗೆಗೆ**
**ಹರಿ ಯಾತ್ರೆಗೆ ಕಾಲೆಳಸವಯ್ಯ ॥**

ಮಾತ್ರವಲ್ಲ, ದುರುದ್ದೇಶದಿಂದ ಹರಿಸ್ಮರಣೆ ಒದಗಿದರೂ ಅದು ನಮ್ಮ ಪಾಪವನ್ನು ಪರಿಹರಿಸುತ್ತದೆ.

## ಸಂಪಾದಕೀಯ

**ಹರಿ ಹರೀ ಹರಿ ಎಂಬ ಎರಡಕ್ಷರ ನುಡಿದ ಮಾತ್ರದಲಿ ದುರಿತಗಳೆರದೆ**

**ಪೋಪವು ತೂಲರಾಶಿಯೊಳ್ ಅನಲಪೊಕ್ಕಂತೆ॥**

ಹರಿನಾಮ ಸ್ಮರಣೆಯ ವೈಶಿಷ್ಟ್ಯವನ್ನು ಜಗನ್ನಾಥದಾಸರು ತಮ್ಮ ಹರಿಕಥಾಮೃತಸಾರದಲ್ಲಿ ತಿಳಿಸಿದ್ದಾರೆ. ಸಾಮಗಾನ ಲೋಲನಾದ ಭಗವಂತನು ಕರುಣಾಸಾಗರನು. ಭಕ್ತಿಯ ಅಭಿವ್ಯಕ್ತಿ ನಾಮಸ್ಮರಣೆಯಾಗಿದೆ.

ನಾಮ ಸಂಕೀರ್ತನೆಯಿಂದ ಭಗವಂತನು ಪ್ರಸನ್ನನಾಗುತ್ತಾನೆ. ಸಾಧಕರ ಮೂಲಾಧಾರ ಚಕ್ರ, ಸ್ವಾಧಿಷ್ಠಾನ ಚಕ್ರಗಳಾದಿಯಾಗಿ ಸಹಸ್ರಾರು ಚಕ್ರಗಳಲ್ಲಿರುವ ಕಮಲದಳಗಳಲ್ಲಿ ಜಾಗೃತಿಯು ನಾಮಸ್ಮರಣೆಯಿಂದ ಆಗುವುದು. ದಾಸರೆಲ್ಲರೂ ತಮ್ಮ ಕೃತಿಗಳಲ್ಲಿ ಇದೇ ವಿಷಯವನ್ನು ನಿರೂಪಿಸಿರುವ ಶೈಲಿ ವಿಭಿನ್ನವಾಗಿದೆ. ಹೀಗೆ ನಿರಂತರವಾಗಿ ಹರಿಯ ಸ್ಮರಿಸುವ ಭಕ್ತರಿಗೆ ಭಗವಂತನು ಮುಕ್ತಿಯೆಂಬ ಪ್ರಸಾದವೀವನು. ತನ್ನನ್ನು ಕೊಂಡಾಡುವ ಭಕ್ತರನ್ನು ಬಿಡದೇ ರಕ್ಷಿಸುತ್ತಾನೆ.

ಸಂಗೀತ ಮಾಧ್ಯಮದಲ್ಲಿ ನಿರೂಪಿತವಾದ ಹರಿದಾಸರ ಉಕ್ತಿ-ಮುಕ್ತಿಗೆ ಸೋಪಾನ. ಆರೋಗ್ಯವರ್ಧನೆ, ಶಾಂತಿ, ಸಮೃದ್ಧಿಗಳ ಸಂಗಮವಾಗಿ ಹರಿನಾಮ ಸಂಕೀರ್ತನೆಯಿಂದು ಮನುಕುಲಕ್ಕೆ ದಾಸ ಬಂಧುಗಳಿತ್ತ ಪ್ರಸಾದವಾಗಿದೆ. ಈ ದಿಶೆಯಲ್ಲಿ ಲೇಖಕರು ಹೆಚ್ಚು ಸಂಶೋಧನಾತ್ಮಕವಾಗಿ ದಾಸವಾಣಿಯ ಸಂದೇಶವೀಯುತ್ತಿರುವುದು ಸ್ವಾಗತಾರ್ಹ.

ಸಂಪಾದಕ, ರಂಗವಿಠಲ



**ಜಗನ್ನಾಥದಾಸರ ಹರಿಕಥಾಮೃತಸಾರ ನೆನಪು ಬರುವ ನಿಜ ಕಥೆ**

## ಮಂತ್ರ ಸಿದ್ಧಿಯ ಫಲ

**ದೇವಗಂಗೆಯೊಳುಳ್ಳವಗೆ ದುರಿ**
**ತಾವಳಿಗಳುಂಟೇ ವಿಚಾರಿಸೆ**
**ಪಾವುಗಳ ಭಯವುಂಟೆ ವಿಹಗಾಧಿಪನ ಮಂದಿರದಿ ॥**
**ಜೀವಕರ್ತೃತ್ವವನು ಮರೆದು ಪ**
**ರಾವರೇಶನೇ ಕರ್ತೃವೆಂದರಿ**
**ದಾವಕರ್ಮವ ಮಾಡಿದರು ಲೇಪಿಸವು ಕರ್ಮಗಳು ॥**

-ಶ್ರೀಹರಿಕಥಾಮೃತಸಾರ, ನಾಮಸ್ಮರಣ ಸಂಧಿ 13 (ಪದ್ಯ-7)

ಜಗನ್ನಾಥದಾಸರು ಭಕ್ತಿಯಿಂದ ಮಾಡಿದ ನಾಮಸ್ಮರಣೆ ಹೆಚ್ಚು ಫಲಕಾರಿಯೆಂದು ತಿಳಿಸಿದ್ದಾರೆ. ಮಂತ್ರಜಪದ ಸಿದ್ಧಿಯು ಆಗಬೇಕಾದರೆ ಭಕ್ತಿಯಿಂದ ಜಪಿಸಲೇ ಬೇಕಾಗುತ್ತದೆ. ಇಂತಹ ನಾಮಸ್ಮರಣೆಯ ಒಂದು ನೈಜ ಕಥೆಯನ್ನು ತಿಳಿಸಲು ಸಂತಸವಾಗುತ್ತದೆ.

ಹಿಂದೆ 17ನೆಯ ಶತಮಾನದ ಮಧ್ಯಭಾಗದಲ್ಲಿ ಶ್ರೀಪಾದರಾಜ ಮಠದ ಪೀಠಾಧಿಪತಿಗಳಾದ **ಶ್ರೀಲಕ್ಷ್ಮೀಪತಿತೀರ್ಥ**ರೆಂಬುವರು ಪೀಠವನ್ನು ಅಲಂಕರಿಸಿದ್ದರು. ಇವರು ಗರುಡ ಮಂತ್ರವನ್ನು ಸಾಧನೆ ಮಾಡಿಕೊಂಡಿದ್ದರು. ತಮಗೆ ಬೃಂದಾವನವಾಗುವ ಕಾಲವು ಸನ್ನಿಹಿತವಾಯಿತೆಂದು ತಿಳಿದು. ಶಿಲ್ಪಿಯನ್ನು ಕರೆಸಿ ಅವನಿಗೆ ಹತ್ತು ದಿನಗಳೊಳಗೆ ಒಂದು ಬೃಂದಾವನವನ್ನು ತಯಾರಿಸಲು ಅಪ್ಪಣೆ ಮಾಡಿದರು. ಶಿಲ್ಪಿಯು ತನ್ನ ಕೆಲಸ ಪ್ರಾರಂಭಿಸಬೇಕೆಂದು ಯೋಚಿಸಲು ಅವನ ಮಗನಿಗೆ ಸರ್ಪವು ಕಚ್ಚಿತು. ಆ ಮಗುವು ಮರಣಹೊಂದಲು. ಶಿಲ್ಪಿಯು ಶ್ರೀಗಳಲ್ಲಿ ಬಂದು ತನ್ನ ಅಳಲನ್ನು ತೋಡಿಕೊಂಡನು.

ತಕ್ಷಣ ಶ್ರೀಗಳವರು ಗರುಡ ಮಂತ್ರವನ್ನು ಜಪಿಸಿ ಗರುಡಾರೂಢನಾದ ಪರಮಾತ್ಮನನ್ನು ಸ್ಮರಿಸಿದರು. ಮಂತ್ರಜಪದ ಪ್ರಭಾವದಿಂದ ಆ ಹುಡುಗನು ಎದ್ದುಕುಳಿತನು.

ಮಂತ್ರ ಜಪದ ಪ್ರಭಾವ ಎಷ್ಟು ಎಂಬುದನ್ನು ತೋರಿಸಿದರು. ಅದೇ ರೀತಿ ನಾಮಸ್ಮರಣೆಯ ಪ್ರಭಾವವನ್ನು ಬೀರಲು ಭಗವದ್ಭಕ್ತಿಯು ಬಹುಮುಖ್ಯ ಎಂಬುದನ್ನು ಶ್ರೀಲಕ್ಷ್ಮೀಪತಿತೀರ್ಥರ ಈ ಘಟನೆಯಿಂದ ಸಿದ್ಧಪಡಿಸಿದಂತಾಗುತ್ತದೆ.

ಶ್ರೀ ಶ್ರೀ[illegible]



**ಹರಿನಾಮ ಸ್ಮರಣೆಯ ಮಹತ್ವ**

**ವಿಶೇಷ ಲೇಖನ**

ಎಂಬ ಶ್ರೀಮದಾಚಾರ್ಯರ ಶ್ರೀಕೃಷ್ಣಾಮೃತಮಹಾರ್ಣವದ ಅಭಯವಾಣಿಯನ್ನೇ

**ಸಾಂಕೇತವಾಗಲಿ ಪರಿಹಾಸ್ಯವಾಗಲಿ**
**ಆಣಕದಿಂದಾಗಲಿ ಡಂಭದಿಂದಾಗಲಿ**
**ಎದ್ದಾಗಲಿ ಮತ್ತೆ ಬಿದ್ದಾಗಲಿ**
**ನಮೋ ನಮೋ ಸಿರಿಕೃಷ್ಣಾ ಎಂಬ ಘೋಷ**
**ಮುಕುತಿ ಕನ್ನಿಕೆಯ ಮದುವೆಯ ವಾದ್ಯ ಘೋಷ ॥**

ಎಂದು ಕನ್ನಡೀಕರಿಸಿದರು ಶ್ರೀವ್ಯಾಸರಾಯರು. ಅಂತೆಯೇ ಶ್ರೀ ಹರಿಕಥಾಮೃತಸಾರದಲ್ಲಿ ಶ್ರೀಜಗನ್ನಾಥದಾಸರು ಸಹ -

**ಬಿಟ್ಟಿಗಳ ನೆವದಿಂದಲಾಗಲಿ**
**ಪೊಟ್ಟೆಗೋಸುಗವಾದಡಾಗಲಿ**
**ಕಟ್ಟರೋಗಪ್ರಯುಕ್ತವಾಗಲಿ ಆಣಕದಿಂದೊಮ್ಮೆ**
**ನಿಟ್ಟುಸಿರಿಬಾಯ್ದೆರೆದು ಹರಿ**
**ವಿಠಲ ಸಲಹೆಂದೆನಲು ಕೈ**
**ಗೊಟ್ಟು ಕಾವ ಕೃಪಾಳು ಸಂತತ ತನ್ನ ಭಕ್ತರನು ॥**

ಮುಂತಾದ ಪದ್ಯಗಳಲ್ಲಿ ವಿವರಿಸಿದ್ದಲ್ಲದೆ ಕಾಲ, ಕರ್ಮ, ವಸ್ತು, ವಿಷಯ, ದೇಹ, ಅವಯವ, ದೇವತಾದಿ ಅಂತರ್ಗತ ಭಗವದ್ರೂಪಗಳ ತಿಳಿದು, '**ಸ್ಮರಿಸುವರ ಅಪರಾಧಗಳ ತಾ ಕ್ಷಮಿಸುವ**' ಎಂದು ಅವನ ಕರುಣೆಯ ಪರಿಯನ್ನು ಕೊಂಡಾಡಿದ್ದಾರೆ.

ಆದಾಗ್ಯೂ ಕಾಟಾಚಾರಕ್ಕೆ ನಾಮಸ್ಮರಣೆ ಮಾಡಬಾರದು.

ಮಂತ್ರಪಠನೆಯ ಫಲ ಬೇಕಾದವರು ಕುಟಿಲ(ಮೋಸ)ವನ್ನು ಬಿಡುವಂತೆಯೇ, ವಿಠಲನ ನಾಮಸ್ಮರಣೆಯ ಫಲ ಬೇಕಾದವರು ಸಟೆಯ(ಸುಳ್ಳುಮಾತ)ನ್ನಾಡುವುದನ್ನು ಬಿಡಬೇಕು.

ರಾಮನಾಮವನ್ನು ನುಡಿಯುವಾಗ ತೋರುವಷ್ಟೇ ಆದರವನ್ನು, ನಮ್ಮ ಕಾಮ-ಕ್ರೋಧ ಮೊದಲಾದ ದುರ್ಗುಣಗಳನ್ನು ಬಿಡುವ ವಿಚಾರದಲ್ಲೂ ತೋರಬೇಕು. ಸಜ್ಜನರ ಸ್ನೇಹವನ್ನು ಮಾಡುವ ಬಗ್ಗೆ, ದುಷ್ಟರ ಸಹವಾಸವನ್ನು ಬಿಡುವಬಗ್ಗೆ ವಿಶೇಷ ಗಮನ ಹರಿಸಿದರೆ ಮಾತ್ರ ಶ್ರೀರಾಮನಾಮಸ್ಮರಣೆ ಸಾರ್ಥಕವಾದೀತು.

**ನಾಮಸಂಕೀರ್ತನಂ ಯಸ್ಯ ಸರ್ವಪಾಪಪ್ರಣಾಶನಮ್।**
**ಪ್ರಣಾಮೋ ದುಃಖಶಮನಃ ತಂ ನಮಾಮಿ ಹರಿಂ ಪರಮ್॥**

ಲೇಖಕ: ಮಾನಕರಿ ಸುಖತೀರ್ಥ ಹುಲಿಕುಂಟಾಚಾರ್ಯ
ಹರಿದಾಸ ವಿದ್ಯಾನಿಲಯ, ನಂ. 79 ಗಣೇಶಕಾಲೋನಿ, ಬಳ್ಳಾರಿ-583103.



**ಹರಿನಾಮ ಸ್ಮರಣೆಯ ಮಹತ್ವ**

**ವಿಶೇಷ ಲೇಖನ**

## ಹರಿನಾಮಸ್ಮರಣೆ- ಶ್ರೀಜಗನ್ನಾಥದಾಸರು

**ಏನು ಕೇಳಿದರೇನು ನೋಡಿದ**
**ರೇನು ಓದಿದರೇನು ಪೇಳಿದ**
**ರೇನು ಪಾಡಿದರೇನು ಮಾಡಿದರೇನು ದಿನದಿನದಿ**
**ಶ್ರೀನಿವಾಸನ ಜನ್ಮಕರ್ಮ ಸ**
**ದಾನುರಾಗದಿ ನೆನೆದು ತತ್ತ**
**ಸ್ಥಾನದಲಿ ತದ್ರೂಪ ತನ್ನಾಮಕನ ಸ್ಮರಿಸದವ॥**

-ಶ್ರೀಹರಿಕಥಾಮೃತಸಾರ - ಶ್ರೀಜಗನ್ನಾಥದಾಸರು ಸರ್ವಪ್ರತೀಕ ಸಂಧಿ 10- ಪದ್ಯ 17.

ಶ್ರೀನಿವಾಸನ ರೂಪ, ಗುಣಗಳು, ಕ್ರಿಯಾವಿಶೇಷಗಳನ್ನು ಪ್ರತಿಯೊಂದರಲ್ಲಿಯೂ ಅವನ ತದ್ರೂಪ, ತದಾಕಾರ, ತನ್ನಾಮ, ತದ್ವಾಚ್ಯನಾಗಿದ್ದು ತದ್ಭಿನ್ನನಾಗಿದ್ದಾನೆ ಎಂದು ತಿಳಿದು ಭಕ್ತಿಯಿಂದ ಸ್ಮರಿಸಬೇಕು. ಅದು ತಿಳಿಯದೇ, ಸಕಲ ಶಾಸ್ತ್ರಗಳನ್ನು ಶ್ರವಣ ಮಾಡುವುದರಿಂದ ಫಲವೇನು ಬರುವುದಿಲ್ಲ, ಕ್ಷೇತ್ರಯಾತ್ರೆಗೆ ಹೋದಾಗ, ಅಲ್ಲಲ್ಲಿ ಕ್ಷೇತ್ರಮೂರ್ತಿಗಳ ಸಂದರ್ಶನ, ಶಾಸ್ತ್ರಾವಲೋಕನ ಇತ್ಯಾದಿ ನೋಡುವುದು ಹಾಗೆ ನೋಡಿದರೇನು ಫಲ? ಶಾಸ್ತ್ರಗಳನ್ನು ಶಾಂತಿಪಾಠಹಾಕಿ ಗುರುದ್ವಾರ ತಿಳಿದು ಅಧ್ಯಯನ ಮಾಡಿದರೂ ಫಲವೇನೂ ಇಲ್ಲವು. ಪಾಠ ಪ್ರವಚನಾದಿಗಳು, ತತ್ತ್ವೋಪದೇಶ ಇತ್ಯಾದಿ ಕರ್ಮಗಳನ್ನು ಪೇಳಿದರೇನು ಎಂದು ತಿಳಿಸುತ್ತಾರೆ. ಇದು ಸಹ ನಿಷ್ಫಲ. ದೈಹಿಕ, ಮಾನಸಿಕ, ಬೌದ್ಧಿಕ, ವಾಚನ ಕ್ರಿಯೆಗಳನ್ನು ಮಾಡಿದರೇನು ಎಂದಿದ್ದಾರೆ. ಗಾಯನ ರೂಪದಿಂದ. ಸುಶ್ರಾವ್ಯವಾಗಿ ಹಾಡಿದರೇನು ಪಾಡಿದರೇನು ಹೀಗೆ ಪೂರ್ವೋಕ್ತ ಶ್ರೀಹರಿಯ ಸಂಸ್ಮರಣೆಯಿಲ್ಲದವನು, ಮಾಡುವ ಶಾಸ್ತ್ರ ಶ್ರವಣ, ಪಠಣ, ಅವಲೋಕನ ಅಧ್ಯಯನ, ಅಧ್ಯಾಪನ, ಗಾಯನ, ಮುಂತಾದ ಸತ್ಕರ್ಮಗಳನ್ನು ದಿನದಿನದಿ ಅಂದರೆ, ನಿರಂತರದಲ್ಲಿಯೂ ಮಾಡುತ್ತಿದ್ದರೂ ಸಹ ಅವುಗಳು ವ್ಯರ್ಥವೇ ಸರಿ. ಫಲಪ್ರದವಾಗುವುದಿಲ್ಲ

**ಹರಿನಾಮ ಸ್ಮರಣೆಯ ಮಹತ್ವ**

**ವಿಶೇಷ ಲೇಖನ**

## ವ್ಯಾಖ್ಯಾನ ರೂಪದಲ್ಲಿ ಈ ರೀತಿಯಾಗಿ ಹೇಳುವರು

ಲಕ್ಷ್ಮೀಪತಿಯಾದ ಸರ್ವಾಂತರ್ಯಾಮಿ ದೇವರ ಪ್ರಾದುರ್ಭಾವ ಅಂದರೆ ರಾಮ ಕೃಷ್ಣಾದ್ಯವತಾರಗಳ ಚರಿತ್ರೆಗಳನ್ನು ಸದಾ ಅನುರಾಗವೆಂಬ ಭಕ್ತಿಯಿಂದ ಸ್ಮರಿಸಬೇಕು. ತತ್ತಸ್ಥಾನದಲ್ಲಿ ತದ್ರೂಪ, ತನ್ನಾಮಕನನ್ನು ಸ್ಮರಿಸುವುದು. ತತ್ತ್ವನ್ಯಾಸದಂತೆ ಮನಸ್ಸು ಕಿವಿ, ಕಣ್ಣು ಮೊದಲಾದ ಹನ್ನೊಂದು ಸ್ಥಾನದಲ್ಲಿ ನಾರಾಯಣಾದಿರೂಪ ಚಿಂತಿಸದವನು, ಶಾಸ್ತ್ರಕೇಳಿದಾಗ್ಯೂ, ಶ್ರೀಹರಿಯನ್ನು ಪ್ರತ್ಯಕ್ಷ್ಯ ನೋಡಿದಾಗ್ಯೂ, ವೇದಾದಿಗಳನ್ನು ಓದಿದಾಗ್ಯೂ , ಪುರಾಣದಿಗಳನ್ನು ಹೇಳಿದಾಗ್ಯೂ, ಸಾಮಗಾನಾದಿಗಳನ್ನು ಮಾಡಿದಾಗ್ಯೂ, ಸತ್ಕರ್ಮ ಮಾಡಿದರೂ ಸತ್ಫಲ ಇಲ್ಲವೆಂದರ್ಥ.

**ಮೂಲರೂಪನು ಮನದೊಳಿಹ ಶ್ರವ**
**ಣಾಲಿಯೊಳಗಿಹ ಮತ್ಸ್ಯಕೂರ್ಮನು**
**ಕೋಲರೂಪನು, ತ್ವ ಗ್ರಸನದೊಳಿಪ್ಪ ನರಸಿಂಹ**
**ಬಾಲವಟು ವಾಮನನು, ನಾಸಿಕ**
**ನಾಳದೊಳು, ವದನದಲಿ ಭಾರ್ಗವ**
**ವಾಲಿಭಂಜನ ಹಸ್ತದೊಳು, ಪಾದದಲಿ ಶ್ರೀಕೃಷ್ಣ ॥**

- ಪಂಚ ಮಹಾಯಜ್ಞ ಸಂಧಿ - ಹರಿಕಥಾಮೃತಸಾರ (ಪುಟ 107)

ಮೂಲರೂಪಿ ನಾರಾಯಣನನ್ನು ಮನಸ್ಸಿನಲ್ಲಿ , ಮತ್ಸ್ಯ ರೂಪಿಯನ್ನು ಕಿವಿಗಳಲ್ಲಿ ಕಣ್ಣುಗಳಲ್ಲಿ ಕೂರ್ಮರೂಪಿಯನ್ನು , ಚರ್ಮದಲ್ಲಿ ವರಾಹ ಮೂರ್ತಿಯನ್ನು , ನಾಲಗೆಯಲ್ಲಿ ನರಸಿಂಹನನ್ನೂ , ಮೂಗಿನಲ್ಲಿ ವಾಮನನನ್ನೂ, ಮುಖದಲ್ಲಿ ಪರಶುರಾಮನನ್ನೂ , ಕೈಗಳಲ್ಲಿ ಶ್ರೀರಾಮನನ್ನೂ ಕಾಲುಗಳಲ್ಲಿ ಶ್ರೀಕೃಷ್ಣನನ್ನೂ , ಗುದದಲ್ಲಿ ಬುದ್ಧನನ್ನೂ , ಉಪಸ್ಥದಲ್ಲಿ ಕಲ್ಕಿಯನ್ನೂ ಹೀಗೆ ದಶಾವತಾರಗಳನ್ನು ಹತ್ತು ಇಂದ್ರಿಯಗಳಲ್ಲಿ ಅನುಸಂಧಾನ ಮಾಡಿ ಆಯಾ ಇಂದ್ರಿಯ ಜನ್ಯ ವಿಷಯಾನುಭವವನ್ನು ಅವನ ಪ್ರೇರಣೆ ಎಂದು ಬಗೆದು ಶ್ರೀಹರಿಗೇ ಸಮರ್ಪಿಸಿದರೆ ಪಾಪನಾಶಕನಾದ ಬಿಂಬಮೂರುತಿ **ಜಗನ್ನಾಥವಿಠಲನು** ಸ್ವೀಕರಿಸಿ ಅನುಗ್ರಹಿಸುವನು.

ಲೇಖಕ: ಜಿ.ಆರ್. ರಘುನಾಥ ರಾವ್
ನಂ. 1003 27-ಎ ಮುಖ್ಯರಸ್ತೆ, 9ನೇ ಬ್ಲಾಕ್, ಜಯನಗರ, ಬೆಂಗಳೂರು-69



**ಹರಿನಾಮ ಸ್ಮರಣೆಯ ಮಹತ್ವ**

**ವಿಶೇಷ ಲೇಖನ**

## ಪರಮಾತ್ಮನ ಭಕ್ತವಾತ್ಸಲ್ಯ

**ಇಟ್ಟಿಕಲ್ಲನು ಭಕುತಿಯಿಂದಲಿ।**
**ಕೊಟ್ಟ ಭಕುತಗೆ ಮೆಚ್ಚಿ ತನ್ನನಿ।**
**ಕೊಟ್ಟ ಬಡಬ್ರಾಹ್ಮಣನ ಒಪ್ಪಿಡಿಯವಲಿಗಖಿಳಾರ್ಥ॥**
**ಕೆಟ್ಟ ಮಾತುಗಳೆಂದ ಚೈದ್ಯನ।**
**ಪೊಟ್ಟೆಯೊಳಗಿಂಬಿಟ್ಟ ಬಾಣದ।**
**ಲಿಟ್ಟ ಭೀಷ್ಮನವಗುಣಗಳೆಣಿಸಿದನೇ ಕರುಣಾಳು॥**

ಪುಂಡರೀಕನೆಂಬ ಭಕ್ತನು ತಂದೆತಾಯ್ಗಳ ಸೇವೆ ಭಕ್ತಿಯಿಂದ ಮಾಡುತ್ತಿರುವಾಗ ಅವನನ್ನು ಪರೀಕ್ಷಿಸಲು ಪರಮಾತ್ಮ ತಾನೇ ಪ್ರತ್ಯಕ್ಷವಾಗಿ ಪುಂಡರೀಕನ ಮನೆಗೆ ಬಂದು ಅಂಗಳದಲ್ಲಿ ನಿಂತನು. ಈತನನ್ನು ಕಂಡರೂ ಸಹಾ ತಂದೆತಾಯಿಯರ ಸೇವೆಯಲ್ಲಿ ತೊಡಗಿದ್ದ ಪುಂಡರೀಕ ಅವರ ಸೇವಾ ನಿಲ್ಲಿಸಿ ಪರಮಾತ್ಮನ ಕಡೆಗೆ ಬರಲಿಲ್ಲ, ಬದಲಾಗಿ ಅಲ್ಲಿಯೇ ಬಿದ್ದಿದ್ದ ಇಟ್ಟಿಗೆ ಅವನ ಕಡೆಗೆ ಎಸೆದ. **ಮಾತೃದೇವೋ ಭವ ಪಿತೃದೇವೋ** ಭವ ಎಂಬುದನ್ನು ಪ್ರತ್ಯಕ್ಷವಾಗಿ ತೋರಿದ ಪುಂಡರೀಕನ ನೈಜ ಭಕುತಿಗೆ ಮಾರುಹೋಗಿ ಅವನು ಅವರುಗಳ ಸೇವಾ ಕೈಂಕರ್ಯ ಮುಗಿಸಿ ಬರುವವರೆಗೂ ಆ ಇಟ್ಟಿಗೆ ಮೇಲೆ ವಿಠಲ ನಿಂತು, ಅವನ ಆಗಮನವಾದ ಕೂಡಲೇ ಅವನ ಭಕ್ತಿಗೆ ಮೆಚ್ಚಿ ಅವನನ್ನು ಉದ್ಧಾರಗೈದ. ಇವತ್ತೂ ಸಹ ಪಂಢರಾಪುರಿಯಲ್ಲಿ ಅವನು ಅದೇ ಇಟ್ಟಿಗೆ ಮೇಲೆ ನಿಂತಿದ್ದಾನೆ.

ಬಡವನಾದ ಸುಧಾಮ ಕೇವಲ ಒಂದು ಹಿಡಿ ಅವಲಕ್ಕಿಯನ್ನು ಭಕ್ತಿಯಿಂದ ಶ್ರೀಕೃಷ್ಣನಿಗೆ ಸಮರ್ಪಿಸಲು ಅದನ್ನು ಆದರದಿಂದ ಸ್ವೀಕರಿಸಿ ಅವನಿಗೆ ಸಕಲ ಭೋಗಗಳನ್ನು ದಯಪಾಲಿಸಿದನು.

ಅನೇಕ ದುಷ್ಟ ಮಾತುಗಳನ್ನು ಆಡಿದ ಶಿಶುಪಾಲನ ಮೇಲೂ ಸಿಟ್ಟಿಗೇಳಲಿಲ್ಲ, ಕೊನೆಗೆ ಅವನ ತೇಜಸ್ಸನ್ನು ತನ್ನ ಹೊಟ್ಟೆಯೊಳಗಿಟ್ಟು ಅವನ ಮೇಲೆ ಕರುಣೆದೋರಿ ಅವನಿಗೆ ಮುಕ್ತಿಯನ್ನು ಪಾಲಿಸಿದನು.

ಮಹಾಭಾರತ ಸಮರದಲ್ಲಿ ಭೀಷ್ಮಾಚಾರ್ಯರು ಕೃಷ್ಣನ ಮೇಲೆ ಅನೇಕ ಬಾಣಗಳನ್ನು ಬಿಟ್ಟರೂ ಕರುಣಾಳುವಾದ ಶ್ರೀಕೃಷ್ಣನು ಭಕ್ತನ ದೋಷಗಳನ್ನು ಎಣಿಸದೆ ಆತನಿಗೆ ಮುಕ್ತಿಯನ್ನು ದಯಪಾಲಿಸಿದನು.

ಪರಮಾತ್ಮನು ತನ್ನ ಭಕ್ತರಿಗೆ ಅವರು ತನ್ನಲ್ಲಿ ತೋರುವ ನಿಷ್ಕಾಮ ಭಕ್ತಿ ಮತ್ತು ನಾಮಸ್ಮರಣೆಗೆ ಒಲಿದು ಅವರನ್ನು ಉದ್ಧಾರ ಮಾಡುತ್ತಾನೆ.

ಲೇಖಕ: ಹರಿದಾಸ ರತ್ನ ನರಹರಿ ರಾಮಚಂದ್ರವಿಠಲ (ಎಸ್.ಜಿ. ರಾಮಚಂದ್ರರಾವ್)
ನಂ. 252, 6ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು-50

### ವ್ಯಾಖ್ಯಾನ ರೂಪದಲ್ಲಿ ಈ ರೀತಿಯಾಗಿ ಹೇಳುವರು

ಲಕ್ಷ್ಮೀಪತಿಯಾದ ಸರ್ವಾಂತರ್ಯಾಮಿ ದೇವರ ಪ್ರಾದುರ್ಭಾವ ಅಂದರೆ ರಾಮ ಕೃಷ್ಣಾದ್ಯವತಾರಗಳ ಚರಿತ್ರೆಗಳನ್ನು ಸದಾ ಅನುರಾಗವೆಂಬ ಭಕ್ತಿಯಿಂದ ಸ್ಮರಿಸಬೇಕು. ತತ್ತತ್ಸ್ಥಾನದಲ್ಲಿ ತದ್ರೂಪ, ತನ್ನಾಮಕನನ್ನು ಸ್ಮರಿಸುವುದು. ತತ್ತ್ವನ್ಯಾಸದಂತೆ ಮನಸ್ಸು, ಕಿವಿ, ಕಣ್ಣು ಮೊದಲಾದ ಹನ್ನೊಂದು ಸ್ಥಾನದಲ್ಲಿ ನಾರಾಯಣಾದಿರೂಪ ಚಿಂತಿಸದವನು, ಶಾಸ್ತ್ರಕೇಳಿದಾಗ್ಯೂ, ಶ್ರೀಹರಿಯನ್ನು ಪ್ರತ್ಯಕ್ಷ್ಯ ನೋಡಿದಾಗ್ಯೂ, ವೇದಾದಿಗಳನ್ನು ಓದಿದಾಗ್ಯೂ , ಪುರಾಣದಿಗಳನ್ನು ಹೇಳಿದಾಗ್ಯೂ, ಸಾಮಗಾನಾದಿಗಳನ್ನು ಮಾಡಿದಾಗ್ಯೂ, ಸತ್ಕರ್ಮ ಮಾಡಿದರೂ ಸತ್ಫಲ ಇಲ್ಲವೆಂದರ್ಥ.

**ಮೂಲರೂಪನು ಮನದೊಳಿಹ ಶ್ರವ**
**ಣಾಲಿಯೊಳಗಿಹ ಮತ್ಸ್ಯಕೂರ್ಮನು**
**ಕೋಲರೂಪನು, ತ್ವ ಗ್ರಸನದೊಳಿಪ್ಪ ನರಸಿಂಹ**
**ಬಾಲವಟು ವಾಮನನು, ನಾಸಿಕ**
**ನಾಳದೊಳು, ವದನದಲಿ ಭಾರ್ಗವ**
**ವಾಲಿಭಂಜನ ಹಸ್ತದೊಳು, ಪಾದದಲಿ ಶ್ರೀಕೃಷ್ಣ ॥**

- ಪಂಚ ಮಹಾಯಜ್ಞ ಸಂಧಿ - ಹರಿಕಥಾಮೃತಸಾರ (ಪುಟ 107)

ಮೂಲರೂಪಿ ನಾರಾಯಣನನ್ನು ಮನಸ್ಸಿನಲ್ಲಿ, ಮತ್ಸ್ಯ ರೂಪಿಯನ್ನು ಕಿವಿಗಳಲ್ಲಿ ಕಣ್ಣುಗಳಲ್ಲಿ ಕೂರ್ಮರೂಪಿಯನ್ನು , ಚರ್ಮದಲ್ಲಿ ವರಾಹ ಮೂರ್ತಿಯನ್ನು , ನಾಲಗೆಯಲ್ಲಿ ನರಸಿಂಹನನ್ನೂ , ಮೂಗಿನಲ್ಲಿ ವಾಮನನನ್ನೂ, ಮುಖದಲ್ಲಿ ಪರಶುರಾಮನನ್ನೂ , ಕೈಗಳಲ್ಲಿ ಶ್ರೀರಾಮನನ್ನೂ ಕಾಲುಗಳಲ್ಲಿ ಶ್ರೀಕೃಷ್ಣನನ್ನೂ , ಗುದದಲ್ಲಿ ಬುದ್ಧನನ್ನೂ , ಉಪಸ್ಥದಲ್ಲಿ ಕಲ್ಕಿಯನ್ನೂ ಹೀಗೆ ದಶಾವತಾರಗಳನ್ನು ಹತ್ತು ಇಂದ್ರಿಯಗಳಲ್ಲಿ ಅನುಸಂಧಾನ ಮಾಡಿ ಆಯಾ ಇಂದ್ರಿಯ ಜನ್ಯ ವಿಷಯಾನುಭವವನ್ನು ಅವನ ಪ್ರೇರಣೆ ಎಂದು ಬಗೆದು ಶ್ರೀಹರಿಗೇ ಸಮರ್ಪಿಸಿದರೆ ಪಾಪನಾಶಕನಾದ ಬಿಂಬಮೂರುತಿ **ಜಗನ್ನಾಥವಿಠಲನು** ಸ್ವೀಕರಿಸಿ ಅನುಗ್ರಹಿಸುವನು.

ಲೇಖಕ: ಜಿ.ಆರ್. ರಘುನಾಥ ರಾವ್
ನಂ. 1003 27-ಎ ಮುಖ್ಯರಸ್ತೆ, 9ನೇ ಬ್ಲಾಕ್, ಜಯನಗರ, ಬೆಂಗಳೂರು-69





## ಪರಮಾತ್ಮನ ಭಕ್ತವಾತ್ಸಲ್ಯ

**ಇಟ್ಟಿಕಲ್ಲನು ಭಕುತಿಯಿಂದಲಿ।**
**ಕೊಟ್ಟ ಭಕುತಗೆ ಮೆಚ್ಚಿ ತನ್ನನಿ**
**ಕೊಟ್ಟ ಬಡಬ್ರಾಹ್ಮಣನ ಒಪ್ಪಿಡಿಯವಲಿಗಖಿಳಾರ್ಥ॥**
**ಕೆಟ್ಟ ಮಾತುಗಳೆಂದ ಚೈದ್ಯನ।**
**ಹೊಟ್ಟೆಯೊಳಗಿಂಬಿಟ್ಟ ಬಾಣದ।**
**ಲಿಟ್ಟ ಭೀಷ್ಮನವಗುಣಗಳೆಣಿಸಿದನೇ ಕರುಣಾಳು॥**

ಪುಂಡರೀಕನೆಂಬ ಭಕ್ತನು ತಂದೆತಾಯ್ಗಳ ಸೇವೆ ಭಕ್ತಿಯಿಂದ ಮಾಡುತ್ತಿರುವಾಗ ಅವನನ್ನು ಪರೀಕ್ಷಿಸಲು ಪರಮಾತ್ಮ ತಾನೇ ಪ್ರತ್ಯಕ್ಷವಾಗಿ ಪುಂಡರೀಕನ ಮನೆಗೆ ಬಂದು ಅಂಗಳದಲ್ಲಿ ನಿಂತನು. ಈತನನ್ನು ಕಂಡರೂ ಸಹಾ ತಂದೆತಾಯಿಯರ ಸೇವೆಯಲ್ಲಿ ತೊಡಗಿದ್ದ ಪುಂಡರೀಕ ಅವರ ಸೇವಾ ನಿಲ್ಲಿಸಿ ಪರಮಾತ್ಮನ ಕಡೆಗೆ ಬರಲಿಲ್ಲ, ಬದಲಾಗಿ ಅಲ್ಲಿಯೇ ಬಿದ್ದಿದ್ದ ಇಟ್ಟಿಗೆ ಅವನ ಕಡೆಗೆ ಎಸೆದ. **ಮಾತೃದೇವೋ ಭವ ಪಿತೃದೇವೋ ಭವ** ಎಂಬುದನ್ನು ಪ್ರತ್ಯಕ್ಷವಾಗಿ ತೋರಿದ ಪುಂಡರೀಕನ ನೈಜ ಭಕುತಿಗೆ ಮಾರುಹೋಗಿ ಅವನು ಅವರುಗಳ ಸೇವಾ ಕೈಂಕರ್ಯ ಮುಗಿಸಿ ಬರುವವರೆಗೂ ಆ ಇಟ್ಟಿಗೆ ಮೇಲೆ ವಿಠಲ ನಿಂತು, ಅವನ ಆಗಮನವಾದ ಕೂಡಲೇ ಅವನ ಭಕ್ತಿಗೆ ಮೆಚ್ಚಿ ಅವನನ್ನು ಉದ್ಧಾರಗೈದ. ಇವತ್ತೂ ಸಹ ಪಂಢರಾಪುರಿಯಲ್ಲಿ ಅವನು ಅದೇ ಇಟ್ಟಿಗೆ ಮೇಲೆ ನಿಂತಿದ್ದಾನೆ.

ಬಡವನಾದ ಸುಧಾಮ ಕೇವಲ ಒಂದು ಹಿಡಿ ಅವಲಕ್ಕಿಯನ್ನು ಭಕ್ತಿಯಿಂದ ಶ್ರೀಕೃಷ್ಣನಿಗೆ ಸಮರ್ಪಿಸಲು ಅದನ್ನು ಆದರದಿಂದ ಸ್ವೀಕರಿಸಿ ಅವನಿಗೆ ಸಕಲ ಭೋಗಗಳನ್ನು ದಯಪಾಲಿಸಿದನು.

ಅನೇಕ ದುಷ್ಟ ಮಾತುಗಳನ್ನು ಆಡಿದ ಶಿಶುಪಾಲನ ಮೇಲೂ ಸಿಟ್ಟಿಗೇಳಲಿಲ್ಲ, ಕೊನೆಗೆ ಅವನ ತೇಜಸ್ಸನ್ನು ತನ್ನ ಹೊಟ್ಟೆಯೊಳಗಿಟ್ಟು ಅವನ ಮೇಲೆ ಕರುಣೆದೋರಿ ಅವನಿಗೆ ಮುಕ್ತಿಯನ್ನು ಪಾಲಿಸಿದನು.

ಮಹಾಭಾರತ ಸಮರದಲ್ಲಿ ಭೀಷ್ಮಾಚಾರ್ಯರು ಕೃಷ್ಣನ ಮೇಲೆ ಅನೇಕ ಬಾಣಗಳನ್ನು ಬಿಟ್ಟರೂ ಕರುಣಾಳುವಾದ ಶ್ರೀಕೃಷ್ಣನು ಭಕ್ತನ ದೋಷಗಳನ್ನು ಎಣಿಸದೆ ಆತನಿಗೆ ಮುಕ್ತಿಯನ್ನು ದಯಪಾಲಿಸಿದನು.

ಪರಮಾತ್ಮನು ತನ್ನ ಭಕ್ತರಿಗೆ ಅವರು ತನ್ನಲ್ಲಿ ತೋರುವ ನಿಷ್ಕಾಮ ಭಕ್ತಿ ಮತ್ತು ನಾಮಸ್ಮರಣೆಗೆ ಒಲಿದು ಅವರನ್ನು ಉದ್ಧಾರ ಮಾಡುತ್ತಾನೆ.

ಲೇಖಕ: ಹರಿದಾಸ ರತ್ನ ನರಹರಿ ರಾಮಚಂದ್ರವಿಠಲ (ಎಸ್.ಜಿ. ರಾಮಚಂದ್ರರಾವ್)
ನಂ. 252, 6ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು-50

## ಹರಿನಾಮಸ್ಮರಣೆ ಯಾವಾಗ ಮಾಡಬೇಕು

ಶ್ರೀಜಗನ್ನಾಥದಾಸರು ಹರಿನಾಮ ಸ್ಮರಣೆಯನ್ನು ಯಾವಾಗ ಮಾಡಬೇಕು? ಯಾವರೀತಿ ಮಾಡಬೇಕು? ಮಾಡುವುದರಿಂದ ಫಲವೇನು? ಎಂಬುದನ್ನು ವಿವರವಾಗಿ ತಮ್ಮ ದೇವರ ನಾಮಗಳಲ್ಲಿ ಹಾಗೂ ವಿಶೇಷವಾಗಿ **ಹರಿಕಥಾಮೃತಸಾರದಲ್ಲಿ** ತಿಳಿಸಿದ್ದಾರೆ. ನಾಮಸ್ಮರಣೆಗೆ ಒಂದು ಸಂಧಿಯನ್ನೇ ಮುಡಿಪಾಗಿಟ್ಟಿದ್ದಾರೆ.

**ಒರಟು ಬುದ್ಧಿಯ ಬಿಟ್ಟು ಲೌಕಿಕ ಹರಟೆಗಳ ನೀಡ್ಯಾಡಿ ಕಾಂಚನ ಪರಟಿ ಲೋಷ್ಟಾದಿಗಳು ಸಮವೆಂದರಿದು ನಿತ್ಯದಲ್ಲಿ ನೆನೆವುತಿರು** ಎಂದು ತಿಳಿಸಿದ್ದಾರೆ.

ಮಲಗುವಾಗಲೀ ಏಳುವಾಗಲೀ ಕುಳಿತು ಮಾತಾಡುತಲಿ, ಮನೆಯೊಳು ಕೆಲಸಗಳ ಮಾಡುತಲಿ ಮೈ ದೊಳೆವಾಗ, ಮೆಲುವಾಗ, ಸಕಲ ಸ್ಥಳಗಳಲ್ಲೂ ಪ್ರತಿಕ್ಷಣ ಭಗವಂತನ ಸ್ಮರಣೆ ಮಾಡಿದರೆ ಸದಾಕಾಲ ನಮ್ಮ ಬಳಿಯಲ್ಲೇ ಇದ್ದು ಒಂದು ಅರೆಕ್ಷಣವೂ ಸಹ ನಮ್ಮನ್ನು ಬಿಟ್ಟಗಲ. ಮಕ್ಕಳನ್ನು ಆಡಿಸುವಾಗ ಮಡದಿಯೊಳು ಅಕ್ಕರದಿ ನಲಿವಾಗ ನಗುವಾಗ ಹಯಪಲ್ಲಕ್ಕಿ, ಗಜ, ಮುಂತಾದ ವಾಹನಗಳೇರಿ ಪ್ರಯಾಣ ಮಾಡುತ್ತಿರುವಾಗ ದೇವಕೀ ತನಯನನ್ನು ಸ್ಮರಿಸಿದರೆ ಯಮದೂತರ ಕೈಗೆಸಿಕ್ಕುವುದಿಲ್ಲ.

**ಸರಿತು ಪ್ರವಾಹಗಳಲ್ಲಿ ದಿವ್ಯಾಂಬರದಿ ಪತ್ರ್ಯಾದಿಯಲ್ಲಿ ಹರ್ಷಾಮರ್ಷ ವಿಸ್ಮೃತಿಯಿಂದಲಾಗಲೀ ಒಮ್ಮೆ ಬಾಯ್ದೆರೆದು ಹರಿಹರಿಹರಿ ಎಂದು ಎರಡಕ್ಷರವ ನುಡಿದ ಮಾತ್ರದಿ ದುರಿತ ರಾಶಿಗಳು ಇರದೇ ಹೋಗುವವು ತೂಲರಾಶಿಯಲಿನಲ ಪೊಕ್ಕಂತೆ** ಅಂದರೆ ಹತ್ತಿಯ ರಾಶಿಯೊಳಗೆ ಒಂದು ಕಿಡಿ ಬೆಂಕಿಬಿದ್ದರೆ ಸಂಪೂರ್ಣ ಹತ್ತಿ ಹೇಗೆ ನಾಶವಾಗುವುದೋ ಹಾಗೇ ನಮ್ಮ ಪಾಪರಾಶಿಗಳು ಕಷ್ಟಕಾರ್ಪಣ್ಯಗಳು ದೂರವಾಗುವವು. ಆದ್ದರಿಂದ ಹೇಗೆ ಸ್ಮರಣೆ ಮಾಡುವುದು? ಎಂಬ ಚಿಂತೆ ಬೇಡ. ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ, ಕುಳಿತುಪಾಡಲು ನಿಂತು ಕೇಳುವ, ನಿಂತು ಪಾಡಲು ನಲಿವ, ನಲಿದರೆ ಒಲಿವ.





ಆದರೆ ಭೀಷ್ಮಾಚಾರ್ಯರು ಶರಶಯ್ಯೆಯ ಮೇಲೆ ಮಲಗಿ ಪಾಡಿದರು, ಶ್ರೀಕೃಷ್ಣ ಅವರ ಬದಿಯಲ್ಲಿ ಕುಳಿತು ಕೇಳಿದ, ಧ್ರುವರಾಯ ಕುಳಿತು ತಪಸ್ಸು ಮಾಡಿದರು, ನಾರಾಯಣ ಅವನೆದುರಿಗೆ ಬಂದು ನಿಂತ, ಪುಟ್ಟ ಪ್ರಹ್ಲಾದ ನಿಂತು ಪಾಡಿದ ಅವನಿಗಾಗಿ ನರಸಿಂಹ ದೇವ ಕಂಬದಿಂದ ಮೂಡಿ ಬಂದು ನಲಿದ, ಒಲಿದ. ಆದ್ದರಿಂದ ಹೇಗಾದರೂ ಪಾಡಿ ಶ್ರೀಹರಿಯನ್ನು ಒಲಿಸಿಕೊಳ್ಳಿ ಎಂದು ಜಗನ್ನಾಥದಾಸರು ಹೇಳುತ್ತಾರೆ.

ಹತ್ತೊಮ್ಮೆ ಒತ್ತಿ ಹೇಳುತ್ತಾರೆ-

**ಸ್ಮರಿಸು ಸಂತತ ಹರಿಯನ್ನು ಮನವೇ।**
**ಸ್ಮರಿಸು ಸಂತತ ಕರುಣಾಳುಗಳ ದೊರೆ.**
**ಜಪ ಹೋಮ ವ್ರತ ದಾನ ತಪಕೆ ದೊರೆಯ॥**

ಚಲುವರೊಳಗತಿ ಚೆಲುವ, ಸುಲಭರೊಳಗತಿ ಸುಲಭ, ಒಲಿವ ಸರಿಬಂದ ತೆರದಿ ಗುಣಕರ್ಮ ಕುಲಶೀಲಗಳನೆಣಿಸ ಭಕುತಿ ಫಲವ ಕೊಡೆ ತಾ ತವಕದಿ. ಶಬರಿ ಎಂಜಲುಂಡ ಕರುಣಾಶರಧಿ ಭರದಿ.

ನೋಡಿ ನೋಡಿಸುತಿಹನು, ಮಾಡಿ ಮಾಡಿಸುತಿಹನು, ನೀಡಿ ನೀಡಿಸುವ, ಓಡಿವಾ ಓಡಿಸುವ, ಬೇಡಿ ಬೇಡಿಸುವ, ಬಡವರೊಡೆಯ ಕೊಂಡಾಡುವವರ ಒಡನಾಡುವ ಈ ಮರ್ಮಗಳೆಲ್ಲ ಸುಳ್ಳೆಂದು ನುಡಿವನೋ ಕೆಡುವ.

**ಸ್ವಗತ ಭೇದ ವಿಶೂನ್ಯ ನಿಗಮ ಸಂಚಾರ ಶ್ರೀ**
**ಜಗನ್ನಾಥ ವಿಟ್ಠಲರೇಯ ತನ್ನ ಪಾದಗಳ ಧ್ಯಾನಿಪರ**
**ನೋಯ ಗೊಡದಂತೆ ಹಗಲಿರುಳು ಕಾವ ಮಾಯಾರಮಣ**
**ನಮ್ಮ ನಗಲಿ ಸೈರಿಸನು ಪ್ರೀಯ ಧ್ಯೇಯಾ**

ಲೇಖಕಿ ಡಾ॥ ಎನ್.ಜಿ. ವಿಜಯಲಕ್ಷ್ಮೀರಾಘವೇಂದ್ರಾಚಾರ್ಯ
ನಂ. 333, 12ನೇ ಮುಖ್ಯರಸ್ತೆ, ಒಂದನೇ ಹಂತ ಗೋಕುಲಬಡಾವಣೆ, ಬೆಂಗಳೂರು-54

ಹರಿನಾಮ ಸ್ಮರಣೆಯ ಮಹತ್ವ

ವಿಶೇಷ ಲೇಖನ

## ಹರಪನಹಳ್ಳಿ ಭೀಮವ್ವನವರ ಕೃತಿ

ಹರಪನಹಳ್ಳಿ ಭೀಮವ್ವನವರ ಈ ಕೆಳಕಂಡ ದೇವರನಾಮದಲ್ಲಿ ಹರಿನಾಮಸ್ಮರಣೆಯಿಂದ ಆಗುವ ಅನುಗ್ರಹವನ್ನು ತಿಳಿಸುತ್ತಾರೆ.

ನಾರಾಯಣ ಎನ್ನಿರೋ ನಾರಾಯಣ ಎನ್ನಿ
ನಾರದ ಪ್ರಿಯನಿಗೆ ನಂದನಸುತ ಮುಕುಂದ ಮುರಾರಿಗೆ ॥ ಪ॥

ಕೆಟ್ಟ ಅಜಮಿಳನ ಬಂದು ಕಟ್ಟಲ್ಯಮಪಾಶದಿ ತಾಕಂ
ಗೆಟ್ಟು ಹರಿನಾಮವ ಕರೆಯೆ ಕೊಟ್ಟ ತನ್ನ ಪಟ್ಟಣ ಪದವಿ ॥ 1॥

ಕಾಲಕಾಲಕ್ಕೆ ಗೋಪಾಲನ ನೆನೆಯದೆ ಬಿಟ್ಟು
ಕಾಲಕಳೆಯಲು ಯಮಭಟರು ಕರೆದು ಬಾಧಿಸದೆ ಬಿಡರು ॥ 2॥

ಸ್ನಾನ ಜಪ ತಪವ್ಯಾಕೆ ಮೌನ ಮಂತ್ರವ ಬಿಟ್ಟು
ದಾನವಾಂತಕ ಕೃಷ್ಣನ್ನಧ್ಯಾನದೊಳಿಟ್ಟರಗಳಿಗೆ ॥ 3॥

ಲೆಕ್ಕವಿಲ್ಲದ ದೇಶ ತುಕ್ಕಿ ತಿರುಗಿದರಿಂದೆ
ದುಃಖವಲ್ಲದೆ ಜ್ಞಾನ ಮುಕ್ತಿ ದೊರಕುವುದೇನು ॥ 4॥

ಬಿಟ್ಟು ವಿಷಯವ ಭೀಮೇಶ ಕೃಷ್ಣನಲ್ಲಿಟ್ಟು ಧ್ಯಾನ
ಹತ್ತು ಹರಿಪುರ ಸೋಪಾನ ರಕ್ಷಿಸುವ ಖಗವಾಹನ ॥ 5॥

ನಾಮಸ್ಮರಣೆಯಿಂದ ಅಜಾಮಿಳ ಹೇಗೆ ಉದ್ಧಾರವಾದ ಎಂದು ಹೇಳುತ್ತಾರೆ. ಅಜಾಮಿಳ ಕಡೆಯ ಉಸಿರು ಎಳೆಯುವಾಗ ಹೊರಗೆ ಆಡುತ್ತಿದ್ದ ತನ್ನ ಮಗನನ್ನು ನಾರಾಯಣ ಎಂದು ಕೂಗಿದಾಗ ವಿಷ್ಣುಭಕ್ತರು ಬಂದು ಅವನನ್ನು ವಿಷ್ಣುಲೋಕಕ್ಕೆ ಕರೆದುಕೊಂಡು ಹೋದರು. ಯಾವಾಗಲೂ ನಾರಾಯಣ ಸ್ಮರಣೆ ಮಾಡದೇ ಯಾವುದೇ ದೇಶ ಅಂದರೆ ತೀರ್ಥಯಾತ್ರೆ ಮಾಡಿದರೆ ಬರೀ ದುಃಖವೇ ಹೊರತು ಜ್ಞಾನಭಕ್ತಿ ದೊರೆಯುವುದಿಲ್ಲ. ವಿಷಯ ವಿಚಾರ ಬಿಟ್ಟು ಭೀಮೇಶ ಕೃಷ್ಣನ್ನ ನೆನೆದರೆ ಗರುಡವಾಹನ ಹರಿಪುರವನ್ನು ಹತ್ತಿಸುವನು.

ಲೇಖಿಕಿ: ಶ್ರೀಮತಿ ಸುಶೀಲ ರಂಗನಾಥರಾವ್
ನಂ. 7, ಫ್ಲಾಟ್ 1, 14ನೇ ಎ ಅಡ್ಡರಸ್ತೆ, ಎಂ.ಇ.ಎಸ್. ಕಾಲೇಜ್, ಮಲ್ಲೇಶ್ವರಂ,ಬೆಂಗಳೂರು-3



ಹರಿನಾಮ ಸ್ಮರಣೆಯ ಮಹತ್ವ

ವಿಶೇಷ ಲೇಖನ

## ಹರಿನಾಮಸ್ಮರಣೆ - ಬಡೆಸಾಹೇಬರು ತಿಳಿಸಿದಂತೆ

ಶ್ರೀಜಗನ್ನಾಥದಾಸರೂ ಮತ್ತು ಇವರ ನಂತರದ ಹರಿದಾಸರುಗಳು ಹರಿನಾಮಸ್ಮರಣೆಯ ಮಹತ್ವ ಬಲ್ಲವರಾಗಿ ಇದೇ ಮುಕ್ತಿಗೆ ಸುಲಭ ಹಾಗೂ ನಿಕಟವಾದ ಮಾರ್ಗ ಎಂಬುದನ್ನು ದೃಢಪಡಿಸಿದ್ದಾರೆ. ಹರಿನಾಮ ಚಿಂತನೆ, ಸ್ಮರಣೆ, ಕೀರ್ತನೆಯ ಮಹತ್ವವನ್ನು ಕಂಡುಕೊಂಡಿದ್ದಾರೆ. ಈ ಅಂಶವನ್ನು ಎಲ್ಲ ದಾಸರೂ ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿ, ಪಾಲಿಸಿದ್ದಾರೆ. ಜನಸಾಮಾನ್ಯರಿಗೂ ಇದನ್ನೇ ಬೋಧಿಸಿದ್ದಾರೆ.

ಅಂತಹ ಹರಿದಾಸರುಗಳಲ್ಲಿ ಒಬ್ಬರು ರಾಮದಾಸರು. ಅನ್ಯಮತೀಯ ಬಡೇಸಾಹೇಬರು ಹರಿಪ್ರೇರಣೆಯಿಂದ ರಾಮ ಮತ್ತು ಶ್ರೀರಾಮ ಎಂಬ ಅಂಕಿತ ಪಡೆದು ಅನೇಕ ಕೃತಿಗಳನ್ನು ರಚಿಸಿದರು. ಆ ಕೃತಿಗಳಲ್ಲಿ ಒಂದು ನಾಮಸ್ಮರಣೆಯ ಮಹತ್ವವನ್ನು ತಿಳಿಸುವುದಾಗಿದೆ.

ಸಾಸಿರ ಮಾತುಗಳ್ಯಾಕೋ ಎಲೆಮನ
ಕೇವಲ ಹರಿನಾಮವೊಂದೇ ಸಾಕೋ ॥ ಪ॥

ಸ್ನಾನಯಾಕೋ ಮೌನವು ಯಾಕೋ
ದಾನವಾರಿಯ ಧ್ಯಾನವೊಂದೆ ಸಾಕೋ ॥ 1॥

ಮಂತ್ರವುಯಾಕೋ ತಂತ್ರವುಯಾಕೋ
ಮಂತ್ರಮೂರ್ತಿ ಚಿಂತೆಯೊಂದೇಸಾಕೋ ॥ 2॥

ಹೋಮವುಯಾಕೋ ನೇಮವು ಯಾಕೋ
ಸ್ವಾಮಿ ಶ್ರೀರಾಮನ ಭಕ್ತಿಯೊಂದೇ ಸಾಕೋ ॥ 3॥

ಅವರದೇ ಇನ್ನೊಂದು ಕೃತಿ - ರಾಮ ನಿಮ್ಮನಾಮಧ್ಯಾನ ಪಾಮರನ ಜಿಹ್ವೆಮೇಲೇ ನಿಲಿಸು:

ಹೆಳವನಕಟ್ಟೆಗಿರಿಯಮ್ಮನವರು

ನಾರಾಯಣಯೆಂಬೋ ನಾಮವನು ನೆನೆದರೆ
ಹಾರಿ ಹೋಹೋದು ಜನ್ಮ ಜನ್ಮದ ಪಾಪಗಳು

ಲೇಖಕ: ಶ್ರೀನಾಥ್ ಕೊನೇಟಿ
ನಂ. 149/ವೈ, 50ನೇ ಅಡ್ಡರಸ್ತೆ, 3ನೇ ವಿಭಾಗ ರಾಜಾಜಿನಗರ, ಬೆಂಗಳೂರು-10